ಚಿತ್ರದುರ್ಗ ತಾಲ್ಲೂಕು ಹಾಯ್ಕಲ್ಲು ಬೊಮ್ಮಕ್ಕನಹಳ್ಳಿ ಗ್ರಾಮಗಳಲ್ಲಿ ಸರಕಾರಿ ಜಮೀನು ಗಳ ಬಗರ್ ಹುಕುಂ ಸಾಗುವಳಿ ಮಾಡಿರುವ ಬಗ್ಗೆ

೧೫೫೯. ಶ್ರೀ ಪೂರ್ಣಮಾತ್ತಪ್ಪ (ಮೊಳಕಾಲ್ಮೂರು).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಚಿತ್ರದುರ್ಗ ತಾಲ್ಲೂಕು ತುರುವನೂರು ಹೋಬಳಿ ಹಾಯ್ಕಲ್ಲು ಹಾಗೂ ಬೊಮ್ಮಕ್ಕನ ಹಳ್ಳಿ ಗ್ರಾಮಗಳಲ್ಲಿ ಸರ್ಕಾರಿ ಜಮೀನುಗಳು ಬಗರುರು ಹುಕ್ಕುಂ ಸಾಗುವಳಿ ಮಾಡಿರುವ ವಿಸ್ತೀರ್ಣ ಎಷ್ಟು ?

(ಆ) ಈ ಪ್ರದೇಶವನ್ನು ಜಾನುವಾರುಗಳ ಉಪಯೋಗಕ್ಕಾಗಿ ತೆರೆದು ಮಾಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

(ಅ) ಚಿತ್ರದುರ್ಗ ತಾಲ್ಲೂಕು ತುರುವನೂರು ಹೋಬಳಿ ಹಾಯ್ಕಲ್ಲು ಗ್ರಾಮದ ಸರ್ಕಾರಿ ಜಮೀನಿನಲ್ಲಿ ೯೬ ಏಕರೆ ಹಾಗೂ ಬೊಮ್ಮಕ್ಕನಹಳ್ಳಿ ಗ್ರಾಮದಲ್ಲಿ ೩೬-೩೦ ಗುಂಟೆ ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡಿರುತ್ತಾರೆ.

(ಆ) ಈಗಾಗಲೇ ಬಗರ್ ಹುಕುಂ ಸಾಗುವಳಿಯನ್ನು ಖುಲ್ಲಾ ಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ಸುಳ್ಯ ತಾಲ್ಲೂಕಿನ ಬಾಳಿಲಗ್ರಾಮದಲ್ಲಿನ ಖಾಸಗಿ ಜಮೀನುಗಳಲ್ಲಿ ರಸ್ತೆ ಮಾಡಿರುವ ಬಗ್ಗೆ

೫೧೮. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಸುಳ್ಯ ತಾಲ್ಲೂಕಿನ ಬಾಳಿಲ ಗ್ರಾಮದಲ್ಲಿನ ಸಾರ್ವಜನಿಕ ಉಪಯೋಗಕ್ಕೆ ಖಾಸಗಿ ಜಮೀನುಗಳನ್ನು ರಸ್ತೆ ಇತರ ಉದ್ದೇಶಕ್ಕೆ ಸರಕಾರದವರು ಸ್ವಾಧೀನಪಡಿಸಿಕೊಂಡಿದ್ದರೂ ಸಂಬಂಧಪಟ್ಟ ಭೂ ವಾಲೀಕರಿಗೆ ಹಣ ಪಾವತಿಯಾಗದೆ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಭೂಮಾಲೀಕರಿಗೆ ಕೂಡಲೇ ಹಣನೀಡುವ ವ್ಯವಸ್ಥೆಯನ್ನು ಮಾಡಲು ಸರಕಾರದವರು ಕ್ರಮ ಕೈಕೊಳ್ಳುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

(ಅ) ಹೌದು. ರೂ. ೧೮೬-೨೫ ಬಾಕಿ ಉಳಿದಿರುತ್ತೆ.

(ಆ) ಸಂಬಂಧಪಟ್ಟ ಭೂಮಾಲೀಕರು ನಿಧನರಾದ್ದರಿಂದ ಉತ್ತರಾಧಿಕಾರ ಪ್ರಮಾಣಪತ್ರವನ್ನು ವಾರಸುದಾರರು ಹಾಜರುಪಡಿಸಿದ ನಂತರ ಪರಿಹಾರ ಹಣವನ್ನು ವಿತರಣೆ ಮಾಡಲಾಗುವುದು.

ರಾಜ್ಯದ ಬರಗಾಲ ಪರಿಹಾರಕ್ಕೆ ಕೇಂದ್ರದಿಂದ ದೊರಕುವ ಸಹಾಯ

೯೯೨. ಶ್ರೀ ಆರ್. ಎನ್. ನಾಯ್ಕ (ಬಟ್ಕಳ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧೯೮೫ನೇ ಸಾಲಿಗೆ ಬರಗಾಲ ಪರಿಹಾರಕ್ಕೆ ರಾಜ್ಯಕ್ಕೆ ಕೇಂದ್ರ ಸರಕಾರದಿಂದ ದೊರಕಿದ ಸಹಾಯಧನ ಎಷ್ಟು ?

(ಆ) ಎಸ್.ಆರ್.ಇಪಿ ಹಾಗೂ ಆರ್.ಎಲ್.ಇ.ಜಿ.ಪಿ ಯೋಜನೆಯಡಿಯಲ್ಲಿ ಬರಪೀಡಿತ ಪ್ರದೇಶ ಗಳಲ್ಲಿ ಖರ್ಚು ಮಾಡಲಾದ ಮೊತ್ತವೆಷ್ಟು ?